# ಕೈಬೆರಳ ಕಲಾಕೃತಿ

ಡಿಟಾಲಜಿ ಅಥವಾ ಕೈಬೆರಳ ಕಲಾಕೃತಿ ಇತ್ತೀಚೆಗೆ ಜಗತ್ತಿನ ಕಲಾಸಕ್ತರ ಗಮನ ಸೆಳೆಯುತ್ತಿವೆ. ಇಟಾಲಿಯನ್‌ನಲ್ಲಿ ಡಿಟೋ ಎಂದರೆ ಕೈಬೆರಳುಗಳು ಎಂದರ್ಥವಂತೆ! ಕೈಬೆರಳುಗಳನ್ನು ವಿಧವಿಧವಾಗಿ ಸಿಂಗರಿಸಿ ಪ್ರದರ್ಶಿಸುವುದು ಅಥವಾ ಫೋಟೋಷಾಪ್‌ನಲ್ಲಿ ಕೈಬೆರಳಿನ ಅಚ್ಚಿಗೆ ವಿವಿಧ ಚಿತ್ರಗಳನ್ನಾಗಿ ಬದಲಾಯಿಸುವುದು ಇದರ ವೈಶಿಷ್ಟ್ಯ. ಈ ಕಲೆ ಇಟಲಿಯ ಡಿಟೋ ವಾನ್ ಟೀಸೆ ಎಂಬ ಕಲಾವಿದನಿಗೆ ಅಂತಾರಾಷ್ಟ್ರೀಯ ಖ್ಯಾತಿ ತಂದುಕೊಟ್ಟಿದೆ. ಇದು ಅವನ ನಿಜವಾದ ಹೆಸರು ಅಲ್ಲವಂತೆ. ಅವನ ಫೋಟೋ ಕೂಡ ಸಿಗುತ್ತಿಲ್ಲವಂತೆ. ಆದರೆ ಅವನ ಹೆಬ್ಬೆರಳಿನ ಫೋಟೋ ಮಾತ್ರ ಜಗತ್ಪ್ರಸಿದ್ಧ! ವೆಬ್‌ಸೈಟ್‌ಗಳಲ್ಲಿ ಅದು ರಾರಾಜಿಸುತ್ತಿದೆ.

ಹೆಬ್ಬೆರಳು ಮತ್ತು ಇತರ ಬೆರಳುಗಳ ಫೋಟೋ ಬಳಿಸಿಕೊಂಡು ಏಸು ಕ್ರಿಸ್ತ, ಸ್ಟೀವ್ ಜಾಬ್ಸ್, ದಲಾಯಿಲಾಮ, ಚೆ ಗುವಾರಾ ಮೊದಲಾದ ಖ್ಯಾತನಾಮರ ಚಿತ್ರಗಳನ್ನು ರಚಿಸಿದಂತೆಯೇ ಷ್ರೆಕ್, ಮಿಕ್ಕಿಮೌಸ್‌ನಂತಹ ಕಾರ್ಟೂನ್ ಕ್ಯಾರೆಕ್ಟರ್‌ಗಳು, ಮೆಕ್‌ಡೊನಾಲ್ಡ್‌ನ ಮನುಷ್ಯ, ಅವತಾರ್ ಸಿನಿಮಾದ ಕ್ಯಾರಿಕೇಚರ್– ಹೀಗೆ ಏನೆಲ್ಲವನ್ನೂ ಈತ ಬಿಡಿಸಿ ಬಿಟ್ಟಿದ್ದಾನೆ.

■ ಬೇದ್ರೆ ಮಂಜುನಾಥ





